# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 246/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಜಿ ವಿ ನಾಗೇಂದ್ರ ಕುಮಾರ್ | ಪಿಡಬ್ಲ್ಯೂ : 2 |
| ತಂದೆಯ / ಗಂಡನ ಹೆಸರು | : ವಸಂತ ಕುಮಾರ್ | ಸಿಡಬ್ಲ್ಯೂ : 2 |
| ವಯಸ್ಸು | : 55 ವರ್ಷ | |
| ಉದ್ಯೋಗ | : ವಾಚ್ ಮೆನ್ | |
| ವಾಸಸ್ಥಳ | : ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 25.01.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಈಗ್ಗೆ 2 ವರ್ಷಗಳ ಹಿಂದೆ ನಾನು ಚಾ.ಸಾ. 3 ರವರ ಬಳಿ ಸೆಕ್ಯೂರಿಟಿ ಗಾರ್ಡ ಆಗಿ ಕೆಲಸ ಮಾಡುತ್ತಿದ್ದೆ. ಸಾಮಾನ್ಯವಾಗಿ ರೈಲ್ವೆ ಗೂಡ್ಸ್ ಶೆಡ್ಡನ ಲಾರಿ ಸ್ಟಾಂಡ್ ಗೆ ನನ್ನನ್ನು ಸೆಕ್ಯೂರಿಟಿಯಾಗಿ ಕಳುಹಿಸುತ್ತಿದ್ದರು. ನಾನು ಯಾವಾಗಲು ರಾತ್ರಿ ಪಾಳಿ ಕೆಲಸ ಮಾಡುತ್ತಿದ್ದೆ. ರಾತ್ರಿ ವೇಳೆ ಇಬ್ಬರು ಸೆಕ್ಯೂರಿಟಿಯಾಗಿ ಕೆಲಸ ನಿರ್ವಹಿಸುತ್ತಿದ್ದೆವು.

2. ಈಗ್ಗೆ 2 ರಿಂದ ಎರಡುವರೆ ವರ್ಷದ ಕೆಳಗೆ ನಾನು ರಾತ್ರಿ ಪಾಳಿ ಕರ್ತವ್ಯದ ಮೇಲಿದ್ದೆ. ನನ್ನ ಜೊತೆ ಬೇರೆ ಯಾರೂ ಇರಲಿಲ್ಲ. ರಾತ್ರಿ 07.30 ರ ಸಮಯಕ್ಕೆ ನಾನು ಅಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದೆ. ರಾತ್ರಿ 10.00 ಗಂಟೆಯ ಮೇಲೆ ನಾನು ಊಟಕ್ಕೆ ಕುಳಿತುಕೊಳ್ಳೋಣ ಎಂದುಕೊಂಡಿದ್ದೆ. ಆಗ ಮಸೀದಿ ಪಕ್ಕದ ರಸ್ತೆಯ ಕಡೆಯಿಂದ ಒಬ್ಬ ವ್ಯಕ್ತಿ

ನನ್ನನ್ನು ಹೊಡೆದು ಬಿಡುತ್ತಾರೆ , ಹೊಡೆದು ಬಿಡುತ್ತಾರೆ ಎಂದು ಬಂದು ಕೆಳಗೆ ಬಿದ್ದ. ಆತ ನಮ್ಮ ಶೆಡ್ಡ ಪಕ್ಕದಲ್ಲಿ ಬಿದ್ದ. ಆತನ ಮುಖದ ಮೇಲೆ ರಕ್ತದ ಗಾಯಗಳಾಗಿದ್ದವು. ಆಗ ನಾನು ಚಾ,ಸಾ. 3 ರವರಿಗೆ ಪೋನ್ ಮಾಡಿದೆ. ನಾವು ಪೋನ್ ಮಾಡಿದ 10 ನಿಮಿಷದ ನಂತರ ಅವರು ಆ ಸ್ಥಳಕ್ಕೆ ಬಂದರು. ನಂತರ ಅವರು ಬಂದು ನೋಡಿ ಕಂಟ್ರೋಲ್ ರೂಂಗೆ ಪೋನ್ ಮಾಡಿದರು. ನಂತರ ಗರುಡಾ ವಾಹನಗಳು, ನೈಟ್ ಬೀಟ್ ಪೋಲೀಸರು ಅಲ್ಲಿಗೆ ಬಂದರು. ನಂತರ ಪೋಲೀಸರು ಹೋಗಿ ಆ್ಯಂಬುಲೆನ್ಸ್ ಕರೆದುಕೊಂಡು ಬಂದು ಆ ವ್ಯಕ್ತಿಯನ್ನು ಅದರಲ್ಲಿ ಹಾಕಿಕೊಂಡು ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಏನಾಯಿತು ಎಂದು ನನಗೆ ಗೊತ್ತಿಲ್ಲ. ಆ ವ್ಯಕ್ತಿ ಅಲ್ಲಿ ಓಡಿ ಬಂದು ಬಿದ್ದಾಗ ನಾನು ಬೇರೆ ಯಾರನ್ನೂ , ಬೇರೆ ಯಾವ ವಾಹನವನ್ನು ನೋಡಿರುವುದಿಲ್ಲ. ಅಲ್ಲಿ ಏಟಾಗಿ ಬಿದ್ದವನು ಯಾವ ಊರಿನವನು ಎನ್ನುವುದು ಗೊತ್ತಾಗಲಿಲ್ಲ. ಆತ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ನಂತರದಲ್ಲಿ ನಾನು ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ. ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರನ್ನು ಈ ಹಿಂದೆ ನಾನು ನೋಡಿರುವುದಿಲ್ಲ. ಅಲ್ಲಿ ಏಟಾಗಿ ಬಿದ್ದ ವ್ಯಕ್ತಿಯ ಪೋಟೋವನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ, ಏಕೆಂದರೆ ಆಗ ಅಲ್ಲಿ ಲೈಟ್ ಬೆಳಕು ಇರಲಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

<u>ಪಾಟೀ ಸವಾಲು : ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

3. ದಿಃ 13.12.2022 ರಂದು ನೀವು ರಾತ್ರಿ ಸುಮಾರು 09.30 ಗಂಟೆ ಸಮಯದಲ್ಲಿ ಗುಂನಂ ಷಾ ವಲಿ ದರ್ಗಾ ದ ಬಳಿ ಇರುವ ಲಾರಿ ಸ್ಟಾಂಡ್ ನಲ್ಲಿ ಕೆಲಸ ಮಾಡುತ್ತಿದ್ದಿರಿ ಅಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ದಿಃ , ತಿಂಗಳು ಮತ್ತು ಇಸವಿಯ ನೆನಪಿಲ್ಲ ಎನ್ನುತ್ತಾರೆ. ಆಗ ರಾತ್ರಿ 09.30 ಕ್ಕೆ ಚಾ,ಸಾ. 3 ರವರು ನಾವು ಕೆಲಸ ಮಾಡುವುದನ್ನು ನೋಡಲು ಬಂದಿದ್ದರು ಎನ್ನುವುದು ಸರಿಯಲ್ಲ. ಆಗ ಒಬ್ಬ ಆಸಾಮಿ ಅಲ್ಲಿ ಕಾಪಾಡಿ , ಕಾಪಾಡಿ ಎಂದು ಕೂಗುವ ಶಬ್ದ ಕೇಳಿಸಿತು ಎನ್ನುವುದು ಸರಿಯಲ್ಲ. ಆಗ ನಾವು ಆ ಕಡೆಗೆ ಟಾರ್ಚ ಹಾಕಿಕೂಂಡು ಹೋದೆವು ಎನ್ನುವುದು ಸರಿಯಲ್ಲ. ಆಗ ಮೂವರು ವ್ಯಕ್ತಿಗಳು ಆಟೋ ರಿಕ್ಷಾದಲ್ಲಿ ಹೊರಟು ಹೋಗಿದ್ದು, ಒಬ್ಬ ಆಸಾಮಿ ಓಡಿ ಬಂದು ನಾನು ಮತ್ತು ಚಾ.ಸಾ. 3 ರವರು ನಿಂತಿದ್ದ ಸ್ಥಳಕ್ಕೆ ಬಂದು ಬಿದ್ದ ಎನ್ನುವುದು ಸರಿಯಲ್ಲ. ಆಗ ನೀವು ಗಾಬರಿಗೊಂಡು, ನೀವು ಟಾರ್ಚ ಬಿಟ್ಟು ನೋಡಲಾಗಿ ಆ ವ್ಯಕ್ತಿಯ ಮುಖ, ಕಾಲುಗಳಿಗೆ ರಕ್ತ ಬರುತ್ತಿತ್ತು ಎಂದು ಮಾಡಿದ ಸಲಹೆಗೆ ಸಾಕ್ಷಿ ಆಗ ಸಮಯ ರಾತ್ರಿ 09.30 ಆಗಿರಲಿಲ್ಲ ಎನ್ನುತ್ತಾರೆ. ಆಗ ಆ ಸ್ಥಳಕ್ಕೆ ಮಂಡಿ ಪೋಲೀಸರು ಬಂದು ಸ್ಥಳ ಪರಿಶೀಲಿಸಿದರು ಎನ್ನುವುದು ಸರಿ . ಅವರು ಆ ವ್ಯಕ್ತಿಯನ್ನು ವಿಚಾರಿಸಲಾಗಿ ಆತ ತನ್ನ ಹೆಸರು ಸುರೇಶ ಬಿನ್ ಕೃಷ್ಣ ಮೂರ್ತಿ, ಪೈಂಟ್ ಕೆಲಸ , ಮೋಚಿ ಕಾಲೋನಿ, ಪೆನ್ಷನ್ ಮೊಹಲ್ಲಾ , ಹಾಸನ ಎಂದು ತಿಳಿಸಿದ ಎನ್ನುವುದು ಸರಿಯಲ್ಲ. ಆತ ತನ್ನ ಮೊಬೈಲ್ ನಂಬರ್ ನ್ನು ಸಹ ತಿಳಿಸಿದ ಎನ್ನುವುದು ಸರಿಯಲ್ಲ. ಆಗ ಆತ ತಾನು ಮೈಸೂರಿನ ದೇವರಾಜಮೊಹಲ್ಲಾದ ಪುಟ್ ಪಾತ್ ನಲ್ಲಿ ವಾಸ ಮಾಡುತ್ತೇನೆ ಎಂದು ತಿಳಿಸಿದ ಎನ್ನುವುದು ಸರಿಯಲ್ಲ. ಅದೇ ರೀತಿ ಪುಟ್ ಪಾತ್ ನಲ್ಲಿ ವಾಸವಿರುವ ಮತ್ತು ಚಿಂದಿ

ಆಯುವ ಆತನಿಗೆ ಪರಿಚಯವಿರುವ ಗೋರು, ಗೋಪಿ , ಮಂಜ ಮತ್ತು ಇತರೇ ಇಬ್ಬರು ತನ್ನನ್ನು ಆಟೋ ರಿಕ್ಷಾದಲ್ಲಿ ಕರೆದುಕೊಂಡು ಬಂದು ಕೊಲೆ ಮಾಡುವ ಉದ್ದೇಶದಿಂದ ತನಗೆ ಚಾಕುವಿನಿಂದ, ಬ್ಲೇಡ್ ನಿಂದ , ಮಚ್ಚಿನಿಂದ ಹಲ್ಲೆ ಮಾಡಿರುತ್ತಾರೆ ಎಂದು ತಿಳಿಸಿದ ಎನ್ನುವುದು ಸರಿಯಲ್ಲ. ಆಗ ಕಿರುಚಿಕೊಂಡು ಅವರಿಂದ ತಪ್ಪಿಸಿಕೊಂಡು ಓಡಿ ಬಂದಾಗ ಅವರುಗಳು ಆಟೋ ರಿಕ್ಷಾದಲ್ಲಿ ಹೊರಟು ಹೋಗಿರುತ್ತಾರೆ ಎಂದು ತಿಳಿಸಿದ ಎನ್ನುವುದು ಸರಿಯಲ್ಲ.

4. ಮರು ದಿನ ಅಂದರೆ ದಿಃ 14.12.2022 ರಂದು ನನ್ನನ್ನು ಮಂಡಿ ಪೋಲೀಸ್ ಠಾಣೆಗೆ ಕರೆಸಿದ್ದರು ಎನ್ನುವುದು ಸರಿಯಲ್ಲ. ಅಲ್ಲಿ ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರನ್ನು ನನಗೆ ಠಾಣೆಯಲ್ಲಿ ತೋರಿಸಿದರು ಎನ್ನುವುದು ಸರಿಯಲ್ಲ. ಇದೇ ರೀತಿಯಲ್ಲಿ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

5. ನಾನು ಪೋಲೀಸರ ಮುಂದೆ ಈಗ ಓದಿ ಹೇಳಿದಂತೆ ದಿಃ 14.12.2022 ರಂದು, "ಅದರಂತೆ ನಾನು ಅವರನ್ನು ನೋಡಲು ರಾತ್ರಿ ಸುಮಾರು ............ ಮತ್ತೆ ನೋಡಿದರೆ ಗುರುತಿಸುತ್ತೇನೆ" ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 3 ಎಂದು ಗುರುತುಪಡಿಸಿಕೊಳ್ಳಲಾಯಿತು.

6. ದಿಃ 15.12.2022 ರಂದು ನನ್ನನ್ನು ಪುನಃ ಸದರಿ ಪೋಲೀಸರು ಕರೆಯಿಸಿ 3 ನೇ ಆರೋಪಿ ಅಕ್ಮಲ್ ಪಾಷ ನನ್ನು ನನಗೆ ಠಾಣೆಯಲ್ಲಿ ತೋರಿಸಿದರು ಎನ್ನುವುದು ಸರಿಯಲ್ಲ. ಆಗ ಪುನಃ ನನ್ನ ಹೇಳಿಕೆಯನ್ನು ಪೋಲೀಸರು ದಾಖಲಿಸಿಕೊಂಡರು ಎನ್ನುವುದು ಸರಿಯಲ್ಲ.

7. ನಾನು ಪೋಲೀಸರ ಮುಂದೆ ಈಗ ಓದಿ ಹೇಳಿದಂತೆ ದಿಃ **15.12.2022** ರಂದು, **"**ಅದರಂತೆ ನಾನು ಅವರನ್ನು ನೋಡಲು ರಾತ್ರಿ ಸುಮಾರು .........**...** ಮತ್ತೆ ನೋಡಿದರೆ ಗುರುತಿಸುತ್ತೇನೆ " ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 4 ಎಂದು ಗುರುತುಪಡಿಸಿಕೊಳ್ಳಲಾಯಿತು.

8. ಈ ಘಟನೆಗೆ ಸಂಬಂಧಪಟ್ಟಂತೆ ಈ ಮೂವರು ಆರೋಪಿತರು ಆಟೋದಲ್ಲಿ ತಪ್ಪಿಸಿಕೊಂಡು ಓಡಿ ಹೋದದ್ದನ್ನು ನೋಡಿರುತ್ತೇನೆ ಎನ್ನುವುದು ಸರಿಯಲ್ಲ. ನಂತರ ಪೋಲೀಸ್ ಠಾಣೆಯಲ್ಲಿಯೂ ನನಗೆ ಈ ಆರೋಪಿತರನ್ನು ತೋರಿಸಿರುತ್ತಾರೆ ಎನ್ನುವುದು ಸರಿಯಲ್ಲ. ಪೋಲೀಸರ ಮುಂದೆ ನಾನು ನಿಪಿ 3 ಮತ್ತು 4 ರಂತೆ ಹೇಳಿಕೆ ಕೊಟ್ಟಿರುತ್ತೇನೆ ಎನ್ನುವುದು ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರು "ಇರುವುದಿಲ್ಲ" ಎಂದಿರುತ್ತಾರೆ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**